ಮನವಿ ಬಂದಿರುತ್ತದೆ. ಇದರ ಸತ್ಯತೆ ಪರಿಶೀಲಿಸಿ ಅರ್ಹ ಪ್ರಕರಣಗಳಲ್ಲಿ ಪರಿಹಾರ ನೀಡಲು ಕಂದಾಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿರುತ್ತದೆ.

ವಿಷಯ : ಕುಡಿಯುವ ನೀರಿನ ತಾಂತ್ರಿಕ ಯೋಜನೆಯ ಅಡಿಯಲ್ಲಿ ರಾಯಚೂರು ಜಿಲ್ಲೆಗೆ ಮಂಜೂರಾದ ಹಣ.

Q: 362

ಶ್ರೀ ಡಿ. ಹಂಪನಗೌಡ (ಸಿಂಧನೂರು) : ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶುದ್ಧ ಕುಡಿಯುವ ನೀರಿನ ತಾಂತ್ರಿಕ ಯೋಜನೆಯ ಅಡಿಯಲ್ಲಿ ರಾಯಚೂರು ಜಿಲ್ಲೆಗೆ ಮಂಜೂರಾದ ಹಣವೆಷ್ಟು?

ಆ) ಜಿಲ್ಲೆಯಲ್ಲಿ ಈ ಯೋಜನೆ ಅಡಿಯಲ್ಲಿ ಮಂಜೂರು ಮಾಡಿದ ಕುಡಿಯುವ ನೀರಿನ ಯೋಜನೆಗಳೆಷ್ಟು ಹಾಗೂ ಈ ಯೋಜನೆಗಳು ಯಾವ ಹಂತದಲ್ಲಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು)

ಇ) ಈ ಯೋಜನೆಗಳು ಮುಗಿಯಬೇಕಾದರೆ ಬೇಕಾಗುವ ಹಣವೆಷ್ಟು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) :

ಅ) ರೂ. 400.00 ಲಕ್ಷಗಳು.

ಆ) 151 ಯೋಜನೆಗಳು.
ತಾಲ್ಲೂಕುವಾರು ಯೋಜನೆಯ ಹಾಲಿ ಸ್ಥಿತಿಯನ್ನು ಕೆಳಗೆ ಕೊಡಲಾಗಿದೆ.

ಕ್ರಮ ಸಂಖ್ಯೆ	ತಾಲ್ಲೂಕು	ಒಟ್ಟು ಯೋಜನೆಗಳ ಸಂಖ್ಯೆ	ಕಾರ್ಯಗತವಾದ ಯೋಜನೆಗಳ ಸಂಖ್ಯೆ	ಚಾಲ್ತಿಯಲ್ಲಿ -ರುವ ಯೋಜನೆ -ಗಳ ಸಂಖ್ಯೆ
1.	ರಾಯಚೂರು	11	6	2
2.	ಮಾನ್ವಿ	21	14	3
3.	ದೇವದುರ್ಗ	30	15	16
4.	ಲಿಂಗಸುಗೂರು	12	6	5
5.	ಸಿಂಧನೂರು	37	19	12
6.	ಕೊಪ್ಪಳ	7	7	-
7.	ಕುಷ್ಟಗಿ	18	9	9
8.	ಗಂಗಾವತಿ	10	5	5
9.	ಯಲಬುರ್ಗ	5	4	1
	ಒಟ್ಟು	151	85	52

೫) ರೂ. 164. 71 ಲಕ್ಷಗಳು.

ವಿಷಯ : ನೆರೆ ಹಾವಳಿಯಿಂದ ಜಲಾವೃತವಾದ ಗ್ರಾಮಗಳ ಬಗ್ಗೆ.

Q: 741

ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೮) ಸಿಂಧನೂರು ತಾಲ್ಲೂಕಿನ ಬಾದರ್ಲಿ, ಹಂಚಿನಾಳ, ಚಿತ್ತಾಲಿ, ಪುಲವೇಶ್ವರ ದಿನ್ನಿ, ಪುಲಗಾಂಜಿ, ಮತ್ತಿನ್ನಿತರ ಗ್ರಾಮಗಳು ನೆರೆ ಹಾವಳಿಯಿಂದ ಜಲಾವೃತಗೊಂಡ ಗ್ರಾಮಗಳಲ್ಲಿರುವ ಮನೆಗಳು ಸಂಪೂರ್ಣವಾಗಿ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

೯) ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

೮) ನೆರೆ ಹಾವಳಿಯಿಂದ ಜಲಾವೃತಗೊಂಡ ಈ ಗ್ರಾಮಗಳಲ್ಲಿ ಮನೆಗಳು ಸಂಪೂರ್ಣವಾಗಿ ಮತ್ತು ಭಾಗಶಃ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

೯) ಈ ಗ್ರಾಮಗಳಲ್ಲಿನ ಬಹಳಷ್ಟು ಮನೆಗಳು ಪ್ರವಾಹದಿಂದ ನಾಶವಾಗಿರುವುದರಿಂದ, ಈ ಗ್ರಾಮಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಈಗಾಗಲೇ ಸರ್ಕಾರ ಕ್ರಮ ಕೈಗೊಂಡಿದೆ. ಈ ಮಧ್ಯೆ ಈ ಗ್ರಾಮಗಳಲ್ಲಿರುವ ನೊಂದ ಸಂತ್ರಸ್ಥರಿಗೆ ನೀಡಬೇಕಾದ ಹಣವನ್ನು ಮತ್ತು ಸಾಮಗ್ರಿಗಳನ್ನು ನೀಡಲಾಗಿದೆ.

ವಿಷಯ : ಗ್ರಾಮಲೆಕ್ಕಿಗರು ನಿಯೋಜಿತ ಸ್ಥಳದಲ್ಲಿ ವಾಸಿಸುವಂತೆ ಕಡ್ಡಾಯ.

Q: 868

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೮) ಗ್ರಾಮ ಲೆಕ್ಕಿಗರು ನಿಯೋಜಿಸಿದ ಸ್ಥಳದಲ್ಲಿ ವಾಸವಿಲ್ಲದೆ ಸಂಬಂಧಿಸಿದ ರೈತರುಗಳು ಅನೇಕ ವಿಧಗಳಲ್ಲಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

೯) ಕಾನೂನು ರೀತಿ ಗ್ರಾಮಲೆಕ್ಕಿಗರು ಅವರವರ ನಿಯೋಜಿತ ಸ್ಥಳಗಳಲ್ಲಿ ಇರಲೇಬೇಕೆಂಬ ಕಡ್ಡಾಯ ನಿಯಮ ಇಲ್ಲವೇ?

೧೦) ಹಾಗಿದ್ದಲ್ಲಿ, ಈ ನಿಯಮಗಳನ್ನು ಉಲ್ಲಂಘಿಸಿದವರ ಮೇಲೆ ಸರ್ಕಾರ ಕ್ರಮ ಕೈಗೊಂಡಿರುವ ಗ್ರಾಮ ಲೆಕ್ಕಿಗರ ಸಂಖ್ಯೆ ಎಷ್ಟು?
(ವಿವರ ನೀಡುವುದು)